**ದಿವಾಣಿ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ, ಸಂಚಾರಿ ನ್ಯಾಯಾಲಯ ,**

**ರಟ್ಟಿಹಳ್ಳಿ**

**ಕ್ರಿಮಿನಲ್ ಮೊಕದ್ದಮೆ ನಂಃ 404/2023**

**ಸಿ.ಡಬ್ಲ್ಯೂ-5 ಪಿ.ಡಬ್ಲ್ಯೂ-3**

ಸಾಕ್ಷಿಯ ಹೆಸರು ◌ಸಿದ್ದಲಿಂಗಪ್ಪ ಶಿರಗಂಬಿ

ತಂದೆಯ ಹೆಸರು ◌ಃಮಹದೇವಪ್ಪ

ವಯಸ್ಸು ◌ಃ40 ವರ್ಷ

ಉದ್ಯೋಗ ◌ವ್ಯವಸಾಯ

ವಾಸಸ್ಥಳ ◌ಕಡೂರು

ದಿನಾಂಕಃ 05-08-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

ಪೋಲಿಸರ ಕೋರಿಕೆಯ ಮೇರೆಗೆ ಎರಡು ದಾಖಲೆಗಳ ಮೇಲೆ ಸಹಿಗಳನ್ನು ಮಾಡಿರುತ್ತೇನೆ. ಸದರಿ ದಾಖಲೆಗಳಲ್ಲಿ ಎನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಹಾಗೂ ಯಾವುದೇ ವಸ್ತುವನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ.

ಪೋಲಿಸರು ನಾಲ್ಕು ಛಾಯಾ ಚಿತ್ರಗಳನ್ನು ಸೆರೆಹಿಡಿದಿರುತ್ತಾರೆ. ಅವುಗಳನ್ನು ಏತಕ್ಕಾಗಿ ಸೆರೆಹಿಡಿದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಗುನ್ನಾ ಸ್ಥಳದ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-2(ಸಿ) ಎಂದು ಗುರುತಿಸಲಾಯಿತು.

ಗುನ್ನಾ ಸ್ಥಳದ ಕಚ್ಚಾ ನಕಾಶೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿ ಪಿ -3(ಸಿ) ಎಂದು ಗುರುತಿಸಲಾಯಿತು.

ಗುನ್ನಾ ಸ್ಥಳದ ಪಂಚನಾಮೆಯ ಕಾಲಕ್ಕೆ ಸೆರೆಹಿಡಿದ ಛಾಯಾಚಿತ್ರ ಹಾಗು ಛಾಯಾಚಿತ್ರದಲ್ಲಿರುವ ತನ್ನ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-4 ಮತ್ತು ನಿಪಿ -5 ಎಂದು ಗುರುತಿಸಲಾಗಿರುತ್ತದೆ.

ಅಪಘಾತ ವಾಹನ ತಡೆ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-8 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-8(ಬಿ) ಎಂದು ಗುರುತಿಸಲಾಯಿತು.

ಅಪಘಾತ ವಾಹನ ತಡೆ ಪಂಚನಾಮೆಯ ಕಾಲಕ್ಕೆ ಸೆರೆಹಿಡಿದ ಎರಡು ಛಾಯಾಚಿತ್ರಗಳನ್ನು ಹಾಗು ಛಾಯಾಚಿತ್ರದಲ್ಲಿರುವ ತನ್ನ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-9 ಮತ್ತು ನಿಪಿ -10 ಎಂದು ಗುರುತಿಸಲಾಗಿರುತ್ತದೆ.

**ಸಿ.ಡಬ್ಲ್ಯೂ-5 ಪಿ.ಡಬ್ಲ್ಯೂ-3**

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ** ಮಾನ್ಯ ಸ.ಸ.ಅ ರವರಿಂದಃ

ದಿನಾಂಕ 02.06.2022 ರಂದು ಚಾಸಾ-21 ರವರು ನನ್ನನ್ನು ಮತ್ತು ಚಾಸಾ-4 ರವರನ್ನು ಘಟನಾ ಸ್ಥಳಕ್ಕೆ ಕರೆಯಿಸಿ ಚಾಸಾ-1 ರವರು ತೋರಿಸಿದ ಗುನ್ನಾ ಸ್ಥಳದ ಪಂಚನಾಮೆಯನ್ನು ನನ್ನ ಹಾಗೂ ಚಾಸಾ-4 ರವರ ಸಮಕ್ಷಮ ಮುಂಜಾನೆ 11.30 ರಿಂದ 12.30 ರವರೆಗೆ ನಿ ಪಿ -2 ರಂತೆ ಪಂಚನಾಮೆಯನ್ನು ಮಾಡಿ ಆ ಕಾಲಕ್ಕೆ ನಿ ಪಿ -3 ರಂತೆ ಹಾತ್ ನಕಾಶೆಯನ್ನು ತಯಾರಿಸಿ ನಮ್ಮಗಳ ಸಹಿಗಳನ್ನು ಪಡೆದುಕೊಂಡು ನಿ ಪಿ -4 ಮತ್ತು ನಿ ಪಿ -5 ರಂತೆ ಛಾಯಾಚಿತ್ರಗಳನ್ನು ಸೆರೆಹಿಡಿದಿರುತ್ತಾರೆ ಎಂದರೆ ಸರಿಯಲ್ಲ.

ಅದೇ ದಿನ ಚಾಸಾ-21 ರವರು ನನ್ನನ್ನು ಮತ್ತು ಚಾಸಾ-4 ರವರನ್ನು ರಟ್ಟಹಳ್ಳಿ ಪೋಲಿಸ್ ಠಾಣೆಗೆ ಕರೆಯಿಸಿ ಚಾಸಾ-18 ರವರು ತೋರಿಸಿದ ಅಪಘಾತಕ್ಕೀಡಾದ ವಾಹನಗಳಾದ ಹೆಚ್ ಎಪ್ ಡಿಲಕ್ಸ ಮೋಟಾರ್ ಸೈಕಲ್ ನಂ.ಕೆ ಎ -27/ಇಜೆ-0408 ಹಾಗೂ ಟಾಟಾ ಎಸಿ ವಾಹನ ಸಂಖ್ಯೆ ಕೆ ಎ -68/3254 ನೇದ್ದವುಗಳನ್ನು ಜಪ್ತಿ ಪಡಿಸಿಕೊಂಡು ನನ್ನ ಹಾಗೂ ಚಾಸಾ-4 ರವರ ಸಮಕ್ಷಮ ಮದ್ಯಾಹ್ಞ 01.00 ರಿಂದ 02.00 ಗಂಟೆಯವರೆಗೆ ನಿ ಪಿ -8 ರಂತೆ ಜಪ್ತಿ ಪಂಚನಾಮೆಯನ್ನು ಮಾಡಿ ಆ ಕಾಲಕ್ಕೆ ನಿ ಪಿ -9 ಮತ್ತು 10 ರಂತೆ ಛಾಯಾಚಿತ್ರಗಳನ್ನು ಸೆರೆಹಿಡಿದು ನಮ್ಮಗಳ ಸಹಿಗಳನ್ನು

ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀ ಸವಾಲುಃ** 1 ನೇ ಆರೋಪಿತನ ಪರ ಶ್ರೀ. ಆರ್ ವಿ ಕೆ ವಕೀಲರಿಂದ:

**( 1 ನೇ ಆರೋಪಿತನ ಪರ ಶ್ರೀ. ಆರ್.ವಿ.ಕೆ ವಕೀಲರು ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ. )**

**ಪಾಟೀ ಸವಾಲುಃ** 3 ನೇ ಆರೋಪಿತನ ಪರ ಶ್ರೀ. ಎಪ್ ಪಿ ಟಿ ವಕೀಲರಿಂದ:

**(3 ನೇ ಆರೋಪಿತನ ಪರ ಶ್ರೀ. ಎಪ್ ಪಿ ಟಿ ವಕೀಲರು ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ. )**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

Sd/-

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ

ಸಂಚಾರಿ ನ್ಯಾಯಾಲಯ, ರಟ್ಟಿಹಳ್ಳಿ

**ದಿವಾಣಿ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ, ಸಂಚಾರಿ ನ್ಯಾಯಾಲಯ ,**

**ರಟ್ಟಿಹಳ್ಳಿ**

**ಕ್ರಿಮಿನಲ್ ಮೊಕದ್ದಮೆ ನಂಃ 404/2023**

**ಸಿ.ಡಬ್ಲ್ಯೂ-4 ಪಿ.ಡಬ್ಲ್ಯೂ-2**

ಸಾಕ್ಷಿಯ ಹೆಸರು ಃಶಿವನಗೌಡ ಮಾಜೇಗೌಡ್ರ

ತಂದೆಯ ಹೆಸರು ಃಮಾದೇಗೌಡ

ವಯಸ್ಸು ಃ29 ವರ್ಷ

ಉದ್ಯೋಗ ಃವ್ಯವಸಾಯ

ವಾಸಸ್ಥಳ ಃಕಡೂರು

ದಿನಾಂಕಃ 05-08-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

ಪೋಲಿಸರ ಕೋರಿಕೆಯ ಮೇರೆಗೆ ಎರಡು ದಾಖಲೆಗಳ ಮೇಲೆ ಸಹಿಗಳನ್ನು ಮಾಡಿರುತ್ತೇನೆ. ಸದರಿ ದಾಖಲೆಗಳಲ್ಲಿ ಎನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಹಾಗೂ ಯಾವುದೇ ವಸ್ತುವನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ.

ಪೋಲಿಸರು ನಾಲ್ಕು ಛಾಯಾ ಚಿತ್ರಗಳನ್ನು ಸೆರೆಹಿಡಿದಿರುತ್ತಾರೆ. ಅವುಗಳನ್ನು ಏತಕ್ಕಾಗಿ ಸೆರೆಹಿಡಿದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**ಸಿ.ಡಬ್ಲ್ಯೂ-4 ಪಿ.ಡಬ್ಲ್ಯೂ-2**

ಗುನ್ಹಾ ಸ್ಥಳದ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-2(ಬಿ) ಎಂದು ಗುರುತಿಸಲಾಯಿತು.

ಗುನ್ಹಾ ಸ್ಥಳದ ಕಚ್ಚಾ ನಕಾಶೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿ ಪಿ -3(ಬಿ) ಎಂದು ಗುರುತಿಸಲಾಯಿತು.

ಗುನ್ಹಾ ಸ್ಥಳದ ಪಂಚನಾಮೆಯ ಕಾಲಕ್ಕೆ ಸೆರೆಹಿಡಿದ ಛಾಯಾಚಿತ್ರ ಹಾಗು ಛಾಯಾಚಿತ್ರದಲ್ಲಿರುವ ತನ್ನ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-4 ಮತ್ತು ನಿಪಿ -5 ಎಂದು ಗುರುತಿಸಲಾಗಿರುತ್ತದೆ.

ಅಪಘಾತ ವಾಹನ ತಡೆ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

ಅಪಘಾತ ವಾಹನ ತಡೆ ಪಂಚನಾಮೆಯ ಕಾಲಕ್ಕೆ ಸೆರೆಹಿಡಿದ ಎರಡು ಛಾಯಾಚಿತ್ರಗಳನ್ನು ಹಾಗು ಛಾಯಾಚಿತ್ರದಲ್ಲಿರುವ ತನ್ನ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-9 ಮತ್ತು ನಿಪಿ -10 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ** ಮಾನ್ಯ ಸ.ಸ.ಅ ರವರಿಂದಃ

ದಿನಾಂಕ 02.06.2022 ರಂದು ಚಾಸಾ-21 ರವರು ನನ್ನನ್ನು ಮತ್ತು ಚಾಸಾ-5 ರವರನ್ನು ಘಟನಾ ಸ್ಥಳಕ್ಕೆ ಕರೆಯಿಸಿ ಚಾಸಾ-1 ರವರು ತೋರಿಸಿದ ಗುನ್ನಾ ಸ್ಥಳದ ಪಂಚನಾಮೆಯನ್ನು ನನ್ನ ಹಾಗೂ ಚಾಸಾ-5 ರವರ ಸಮಕ್ಷಮ ಮುಂಜಾನೆ 11.30 ರಿಂದ 12.30 ರವರೆಗೆ ನಿ ಪಿ -2 ರಂತೆ ಪಂಚನಾಮೆಯನ್ನು ಮಾಡಿ ಆ ಕಾಲಕ್ಕೆ ನಿ ಪಿ -3 ರಂತೆ ಹಾತ್ ನಕಾಶೆಯನ್ನು ತಯಾರಿಸಿ ನಮ್ಮಗಳ ಸಹಿಗಳನ್ನು ಪಡೆದುಕೊಂಡು ನಿ ಪಿ -4 ಮತ್ತು ನಿ ಪಿ -5 ರಂತೆ ಛಾಯಾಚಿತ್ರಗಳನ್ನು ಸೆರೆಹಿಡಿದಿರುತ್ತಾರೆ ಎಂದರೆ ಸರಿಯಲ್ಲ.

ಅದೇ ದಿನ ಚಾಸಾ-21 ರವರು ನನ್ನನ್ನು ಮತ್ತು ಚಾಸಾ-5 ರವರನ್ನು ರಟ್ಟಹಳ್ಳಿ ಪೋಲಿಸ್ ಠಾಣೆಗೆ ಕರೆಯಿಸಿ ಚಾಸಾ-18 ರವರು ತೋರಿಸಿದ ಅಪಘಾತಕ್ಕೀಡಾದ ವಾಹನಗಳಾದ ಹೆಚ್ ಎಪ್ ಡಿಲಕ್ಸ ಮೋಟಾರ್ ಸೈಕಲ್ ನಂ.ಕೆ ಎ -27/ಇಜೆ-0408 ಹಾಗೂ ಟಾಟಾ ಎಸಿ ವಾಹನ ಸಂಖ್ಯೆ ಕೆ ಎ -68/3254 ನೇದ್ದವುಗಳನ್ನು ಜಪ್ತಿ ಪಡಿಸಿಕೊಂಡು ನನ್ನ ಹಾಗೂ ಚಾಸಾ-5 ರವರ ಸಮಕ್ಷಮ ಮದ್ಯಾಹ್ನ 01.00 ರಿಂದ 02.00 ಗಂಟೆಯವರೆಗೆ ನಿ ಪಿ -8 ರಂತೆ ಜಪ್ತಿ ಪಂಚನಾಮೆಯನ್ನು ಮಾಡಿ ಆ ಕಾಲಕ್ಕೆ ನಿ ಪಿ -9 ಮತ್ತು 10 ರಂತೆ ಛಾಯಾಚಿತ್ರಗಳನ್ನು ಸೆರೆಹಿಡಿದು ನಮ್ಮಗಳ ಸಹಿಗಳನ್ನು

ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀ ಸವಾಲುಃ** 1 ನೇ ಆರೋಪಿತನ ಪರ ಶ್ರೀ. ಆರ್ ವಿ ಕೆ ವಕೀಲರಿಂದ:

**( 1 ನೇ ಆರೋಪಿತನ ಪರ ಶ್ರೀ. ಆರ್.ವಿ.ಕೆ ವಕೀಲರು ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ. )**

**ಪಾಟೀ ಸವಾಲುಃ** 3 ನೇ ಆರೋಪಿತನ ಪರ ಶ್ರೀ. ಎಪ್ ಪಿ ಟಿ ವಕೀಲರಿಂದ:

**(3 ನೇ ಆರೋಪಿತನ ಪರ ಶ್ರೀ. ಎಪ್ ಪಿ ಟಿ ವಕೀಲರು ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ. )**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

Sd/-

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ

ಸಂಚಾರಿ ನ್ಯಾಯಾಲಯ, ರಟ್ಟಿಹಳ್ಳಿ

**ದಿವಾಣಿ ನ್ಯಾಯಾಧೀಶರು ಮತ್ತು ಜೆಎಮ್‌ಎಫ್‌ಸಿ, ಸಂಚಾರಿ ನ್ಯಾಯಾಲಯ ,**

**ರಟ್ಟಿಹಳ್ಳಿ**

**ಕ್ರಿಮಿನಲ್ ಮೊಕದ್ದಮೆ ನಂಃ 404/2023**

**ಸಿ.ಡಬ್ಲ್ಯೂ-1 ಪಿ.ಡಬ್ಲ್ಯೂ-1**

ಸಾಕ್ಷಿಯ ಹೆಸರು ಃಪ್ರಕಾಶ ಲಕ್ಕನಗೌಡರ

ತಂದೆಯ ಹೆಸರು ಃಃಶಿವಾನಂದಪ್ಪ

ವಯಸ್ಸು ಃಃ36 ವರ್ಷ

ಉದ್ಯೋಗ ಃವ್ಯವಸಾಯ

ವಾಸಸ್ಥಳ ಃಕಡೂರು

ದಿನಾಂಕಃ 05-08-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

ಚಾಸಾ-8 ನನ್ನ ತಂದೆ. ಚಾಸಾ-9 ನನ್ನ ಮಾವ. ಚಾಸಾ-10 ರಿಂದ 13 ರವರು ನನ್ನ ಸಂಬಂಧಿಕರು. ನ್ಯಾಯಾಲಯದ ಮುಂದಿರುವ 1 ನೇ ಆರೋಪಿತ ನನ್ನ ತಮ್ಮ. 2 ಮತ್ತು 3 ನೇ ಆರೊಪಿತರ ಪರಿಚಯ ಇರುವುದಿಲ್ಲ. ಮೃತ ಚಂದ್ರಶೇಖರಗೌಡ ನನ್ನ ಚಿಕ್ಕಪ್ಪ. ಅಂದಾಜು 4 ವರ್ಷಗಳ ಹಿಂದೆ ನನ್ನ ಚಿಕ್ಕಪ್ಪ ದ್ವಿಚಕ್ರ ವಾಹನದಲ್ಲಿ ಹೋಗುತ್ತಿರುವಾಗ ರಸ್ತೆ ಅಪಘಾತವಾಗಿ ಮರಣ ಹೊಂದಿರುತ್ತಾರೆ. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಅಪಘಾತ ಹೇಗೆ ಆಗಿರುತ್ತದೆ ಮತ್ತು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪಿರ್ಯಾದಿಯಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಪೋಲಿಸರು

ನಾನು ಠಾಣೆಗೆ ಹೋದಾಗ ಮೂರು ದಾಖಲೆಗಳ ಮೇಲೆ ಸಹಿ ಪಡೆದುಕೊಂಡಿರುತ್ತಾರೆ. ಸದರಿ ದಾಖಲೆಗಳಲ್ಲಿ ಎನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

ಪೋಲಿಸರು ಎರಡು ಛಾಯಾ ಚಿತ್ರಗಳನ್ನು ಸೆರೆಹಿಡಿದಿರುತ್ತಾರೆ ಅವುಗಳನ್ನು ಯಾವ ಕಾರಣಕ್ಕಾಗಿ ಸೆರೆಹಿಡಿದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಪಿರ್ಯಾದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ ಪಿ -1(ಎ) ಎಂದು ಗುರುತಿಸಲಾಯಿತು.

ಗುನ್ನಾ ಸ್ಥಳದ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ ಪಿ -2(ಎ) ಎಂದು ಗುರುತಿಸಲಾಯಿತು.

ಗುನ್ನಾ ಸ್ಥಳದ ಕಚ್ಚಾ ನಕಾಶೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ ಪಿ -3(ಎ) ಎಂದು ಗುರುತಿಸಲಾಯಿತು.

ಗುನ್ನಾ ಸ್ಥಳದ ಪಂಚನಾಮೆಯ ಕಾಲಕ್ಕೆ ಸೆರೆಹಿಡಿದ ಎರಡು ಛಾಯಾ ಚಿತ್ರಗಳು ಹಾಗೂ ಛಾಯಾಚಿತ್ರದಲ್ಲಿರುವ ತನ್ನ ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ -4 ಮತ್ತು ನಿಪಿ -5 ಎಂದು ಗುರುತಿಸಲಾಯಿತು.

**ಸಿ.ಡಬ್ಲ್ಯೂ-1 ಪಿ.ಡಬ್ಲ್ಯೂ-1**

ಅಪಘಾತದ ವಾಹನ ತಡೆ ಪಂಚನಾಮೆಯ ಕಾಲಕ್ಕೆ ಸೆರೆಹಿಡಿದ ಎರಡು ಛಾಯಾ ಚಿತ್ರಗಳು ಹಾಗೂ ಛಾಯಾಚಿತ್ರದಲ್ಲಿರುವ ಎರಡು ವಾಹನಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ -6 ಮತ್ತು ನಿಪಿ -7 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀಸವಾಲುಃ** ಮಾನ್ಯ ಸ.ಸ.ಅ ರವರಿಂದಃ

ದಿನಾಂಕ 30.05.2022 ರಂದು ಸಂಜೆ 05.30 ಗಂಟೆಯ ಸುಮಾರಿಗೆ ನಾನು ನಮ್ಮ ಮನೆಯ ಹತ್ತಿರ 1 ನೇ ಆರೋಪಿತ ಮೋಟಾರ್ ಸೈಕಲ್ ಸಂಖ್ಯೆ ಕೆ ಎ 27 ಇ ಜೆ - 0408 ನೇದ್ದರ ಹಿಂದೆ ಅವರ ತಂದೆ ಮೃತ ಚಂದ್ರಶೇಖರ ರವರನ್ನು ಕೂಡಿಸಿಕೊಂಡು ಜೋಯಿಸರಹರಳಹಳ್ಳಿಗೆ ದೇವರಿಗೆ ಹೋಗಿ ಬರುತ್ತೇನೆ ಅಂತಾ ಹೇಳಿ ಮೋಟಾರ್ ಸೈಕಲ್ ನ ಮೇಲೆ ಹೋಗಿರುತ್ತಾರೆ ಎಂದರೆ ಸರಿ. ಸಂಜೆ 06.00 ಗಂಟೆಯ ಸುಮಾರಿಗೆ ರಟ್ಟಿಹಳ್ಳಿ ಬ್ಯಾಡಗಿ ರಸ್ತೆ ತಿಮಾಲಾಪುರ ಕುಂಚೂರು ನಡುವೆ ಶಿವಪ್ಪ ಹೊಸುರು ಇವರ ಹೊಲದ ಹತ್ತಿರ ಒಂದು ಟಾಟಾ ಎ ಸಿ ವಾಹನ ಚಾಲಕನು ವಾಹನವನ್ನು ಬ್ಯಾಡಗಿ ಕಡೆಯಿಂದ ರಟ್ಟಿಹಳ್ಳಿ ಕಡೆಗೆ ನಿರ್ಲಕ್ಷತನದಿಂದ ಅತೀ ವೇಗವಾಗಿ ಪ್ರಾಣಕ್ಕೆ ಅಪಾಯವಾಗುವಂತೆ ನಡೆಸಿಕೊಂಡು ಬಂದು 1 ನೇ ಆರೋಪಿತ ನಡೆಸುತ್ತಿದ್ದ ಮೋಟಾರ್ ಸೈಕಲ್ ಗೆ ಡಿಕ್ಕಿಪಡಿಸಿ ಅಪಘಾತ ಮಾಡಿ ಚಂದ್ರಶೇಖರ ರವರು ಸ್ಥಳದಲ್ಲಿ

ಮರಣ ಹೊಂದುವಂತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಚಂದ್ರಶೇಖರ ರವರ ಶವವನ್ನು ಶವಾಗಾರ ಕೋಣೆಗೆ ಕಳುಹಿಸಿಕೊಟ್ಟಿದ್ದ ಬಗ್ಗೆ ಜನರು ಮಾತನಾಡುತ್ತಿರುವುದನ್ನು ತಿಳಿದು ನಾನು , ಚಾಸಾ-9 ರಿಂದ 11 ರವರು ಕೂಡಿ ರಟ್ಟಿಹಳ್ಳಿ ಸರ್ಕಾರಿ ಆಸ್ಪತ್ರೆಗೆ ಬಂದು ನೋಡಿ 1 ನೇ ಆರೋಪಿತನಿಗೆ ತಲೆಗೆ ಗಾಯ ಮತ್ತು ಮೈಕೈಗೆ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ಗಾಯಾಳು ಚಂದ್ರಶೇಖರ ರವರನ್ನು 108 ವಾಹನದ ಮುಖಾಂತರ ರಾಣೇಬೆನ್ನೂರು ಒಂ ಆಸ್ಪತ್ರೆಗೆ ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ. ನಂತರ ನಾನು ಶವಾಗರ ಕೋಣೆಗೆ ಹೋಗಿ ಮೃತ ಚಂದ್ರಶೇಖರ ರವರನ್ನು ನೋಡಲಾಗಿ ಅವರ ಮೊಣಕಾಲು ಕೆಳಗೆ ಬಾರೀ ಒಳಪೆಟ್ಟಾಗಿ ಮುರಿದಿದ್ದು , ಎಡಹಣೆ , ಎಡಪಕ್ಕೆಗೆ, ಎಡತೊಡೆಗೆ ಹಾಗೂ ಬಲಗಾಲು ತೊಡೆಗೆ ತೆರಚಿದ ಗಾಯವಾಗಿದ್ದವು ಎಂದರೆ ಸರಿಯಲ್ಲ. ಅಪಘಾತದ ಸ್ಥಳಕ್ಕೆ ಹೋಗಿ ವಿಚಾರಿಸಿ ಸದರಿ ಅಪಘಾತವು ಟಾಟಾ ಎ ಸಿ ವಾಹನ ಸಂಖ್ಯೆಕೆ ಎ 68/3254 ನೇದ್ದರ ಚಾಲಕನಾದ 2 ನೇ ಆರೋಪಿತನ ತಪ್ಪಿನಿಂದ ಆಗಿರುತ್ತದೆಂದು ತಿಳಿದು ನಾನು ಠಾಣೆಗೆ ಬಂದು ನಿ ಪಿ -1 ರಂತೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ದಿನಾಂಕ 02.06.2022 ರಂದು ಚಾಸಾ-21 ರವರು ಚಾಸಾ-4 ಮತ್ತು ಚಾಸಾ-5 ರವರನ್ನು ಘಟನಾ ಸ್ಥಳಕ್ಕೆ ಕರೆಸಿ ನಾನು ತೋರಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ನಿ ಪಿ -2 ಮತ್ತು 3 ರಂತೆ ತಯಾರಿಸಿ ಮುಂಜಾನೆ 11.30 ರಿಂದ 12.30 ರವರೆಗೆ ಜರುಗಿಸಿ ನಿ ಪಿ -4 ಮತ್ತು 5 ರಂತೆ ಛಾಯಾ ಚಿತ್ರಗಳನ್ನು ಸೆರೆಹಿಡಿದು ನನ್ನ ಸಹಿಗಳನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತವು 1 ಮತ್ತು 2 ನೇ

ಆರೋಪಿತರ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. 1 ನೇ ಆರೋಪಿತ ನನ್ನ ತಮ್ಮನಾಗಿರುವುದರಿಂದ ಎಲ್ಲಾ ವಿಷಯ ಗೊತ್ತಿದ್ದರೂ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 1 ನೇ ಆರೋಪಿತನ ಪರ ಶ್ರೀ. ಆರ್ ವಿ ಕೆ ವಕೀಲರಿಂದ:
**( 1 ನೇ ಆರೋಪಿತನ ಪರ ಶ್ರೀ. ಆರ್.ವಿ.ಕೆ ವಕೀಲರು ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.** )

**ಪಾಟೀ ಸವಾಲುಃ** 3 ನೇ ಆರೋಪಿತನ ಪರ ಶ್ರೀ. ಎಪ್ ಪಿ ಟಿ ವಕೀಲರಿಂದ:
**(3 ನೇ ಆರೋಪಿತನ ಪರ ಶ್ರೀ. ಎಪ್ ಪಿ ಟಿ ವಕೀಲರು ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.** )

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ.

Sd/-
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ
ಸಂಚಾರಿ ನ್ಯಾಯಾಲಯ, ರಟ್ಟಿಹಳ್ಳಿ